ದಿ.16-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಚವನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಎದುರುದಾರರ ಪರ ಶ್ರೀ. ಎನ್ ಕೆ ವಕೀಲರಿಂದ.

ಈ ಪ್ರಕರಣದಲ್ಲಿ ನಾನು ಎದುರುದಾರನಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ಧು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ನಾನೇ ಹೇಳಿ ಬರೆಸಿ, ಓದಿ, ತಿಳಿದುಕೊಂಡು ಅದಕ್ಕೆ ಸಹಿ ಮಾಡಿದೇನೆ.

ಎದುರುದಾರ ಕಂಪನಿಯವರು ನನಗೆ ಈ ಪ್ರಕಣದಲ್ಲಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿದ್ದು, (ಮೂಲ ಪ್ರತಿ ಮಿಸ್.324/19 ರಲ್ಲಿ ಅಳವಡಿಸಿದ್ದು), ಅದರ ಜೆರಾಕ್ಸ ಪ್ರತಿಯನ್ನು ಅದನ್ನು ನಿ.ಆರ್.1 ಎಂದು ಗುರುತಿಸಲಾಯಿತು. ದಾವಣಗೆರೆಯಿಂದ ಸೊಕ್ಕೆ ಮಾರ್ಗದಲ್ಲಿ ವಿದ್ಯುತ್ ಲೈನ್ ಎಳೆದಿದ್ದು, ಸದರಿ ಲೈನ್ ಹಾಲಿ ಇರುವ ಮಾರ್ಗದಲ್ಲಿ ಪುನಃ ದುರಸ್ಥಿ ಕಾರ್ಯವನ್ನು ದಿ.13-08-2015 ರಂದು ಕಾಮಗಾರಿ ಕೆಲಸ ಮುಗಿದಿದ್ದರ ಬಗ್ಗೆ ದಾಖಲೆ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಅರ್ಜಿದಾರರ ಪರ ವಕೀಲರ ತಕರಾರಿಗೆ ಒಳಪುಟ್ಟ ನಿ.ಆರ್-2 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಅರ್ಜಿದಾರರ ಪರ ಶ್ರೀ ಡಿ ಹೆಚ್ ಜಿ/ ಕೆ ಹೆಚ್ ಎಸ್ ವಕೀಲರಿಂದ.

ಈ ಕೇಸಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಈ ಪ್ರಕರಣದಲ್ಲಿ ನಮ್ಮ ಪರ ವಕೀಲರು ಯಾವ-ಯಾವಾಗ ಏನು ಏನು ಅರ್ಜಿ ಸಲ್ಲಿಸಿರುತ್ತಾರೆ ಎಂದು ಮಾಹಿತಿ ಇದೆ. 2019 ರಲ್ಲಿ ಈ ಕೇಸು ದಾಖಲಾಗಿದೆ. ಸದರಿ ಲೈನ್ ಹಳೆ ಲೈನನ್ನು ತೆಗೆದು ಹೊಸ ಲೈನನ್ನು ಅಳವಡಿಸಲಾಗಿದೆ. ಒಂದು ಸ್ಟೇಷನ್ ನಿಂದ ಇನ್ನೊಂದು ಸ್ಟೇಷನ್ ಗೆ ಲೈನ್ ಎಳೆಯಲಾಗಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ - ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಸಲುವಾಗಿ ಲೈನ್ ಎಳೆಯಾಗಿದೆ ಎಂದು ಉತ್ತರಿಸಿರುತ್ತಾರೆ. ಸದರಿ ಲೈನ್ ವಾಣಿಜ್ಯ ಉಪಯೋಗಕ್ಕಾಗಿ ಸಹ ಅಳವಡಿಸಲಾಗಿದೆ ಮತ್ತು ಉಪಯೋಗಿಸಲಾದೆ. ಇದಕ್ಕೆ ಸಂಬಧಪಟ್ಟಂತೆ ಆಯಾ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಕರೆಂಟ್ ಉಪಯೋಗಿಸಿದಂತೆ ಹಣ ಸಹ ವಸೂಲಿ ಸಹ ಮಾಡುತ್ತೇವೆ. ವಿಂಡ್ ಪವರ್ ನಿಂದ ನಾವು ಕರೆಂಟ್ ಉತ್ಪಾದಿಸುತ್ತೇವೆ, ಪುನಃ ಅದನ್ನು ಗ್ರಾಹಕರಿಗೆ ಮಾರಾಟ ಮಾಡುತ್ತೇವೆ. ಅದೇ ಪ್ರಕಾರ ಬೇರೆ ರಾಜ್ಯಕ್ಕೆ ನಾವು ಮಾರಾಟ ಮಾಡುತ್ತೇವೆ ಎನ್ನುವುದು ಗೊತ್ತಿಲ್ಲ.

ಲೈನ್ ಎಳೆಯುವಾಗ ಆ ಜಾಗದಲ್ಲಿರುವ ಬೆಳೆ ನಷ್ಟವಾಗುತ್ತದೆ. ಸದರಿ ಲೈನ್ ಕೆಳಗಡೆ ಬೋರ್ ವೆಲ್ ತೆಗೆಸಲಾಗಿರುತ್ತದೆ ಎನ್ನುವುದು ಗೊತ್ತಿಲ್ಲ. ಅರ್ಜಿದಾರರ ಜಮೀನು ನೀರಾವರಿ ಜಮೀನು ಇರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಲೈನ್ ಎಳೆದಿರುವುದರಿಂದ ಅರ್ಜಿದಾರರಿಗೆ ಲೈನ್ ಕೆಳಗಡೆ ಜಮೀನಿನಲ್ಲಿ ಕೆಲಸ ಮಾಡಲು ತೊಂದರೆ ಉಂಟಾಗುತ್ತಿದೆ ಎನ್ನುವುದು ಸರಿಯಲ್ಲ. ಲೈನ್ ಕೆಳಗಡೆ ಶಾಶ್ವತ ಅಡಿಕೆ ಬೆಳೆ ಬೆಳೆಯಲು ಸಾಧ್ಯವಿಲ್ಲ. ಹಾಗೂ ಆ ಸ್ಥಳದಲ್ಲಿ ಕಟ್ಟಡ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಲೈನ್ ಎಳೆದಿರುವುದರಿಂದ ಭೂಮಿಯ ಅಪಮೌಲ್ಯವಾಗಿರುತ್ತದೆ ಎನ್ನುವುದು ಸುಳ್ಳು. ಅರ್ಜಿದಾರರಿಗೆ ನಾವು ಬೆಳೆ ಪರಿಹಾರ ಕೊಟ್ಟಿದ್ದೇವೆ. ಆದರೆ ಭೂ ಪರಿಹಾರ ಕೊಟ್ಟಿಲ್ಲ, ಕಾರಣ ಆ ಸಮಯದಲ್ಲಿ ಇರಲಿಲ್ಲ. ಹಳೆ ಲೈನ್ ತೆಗೆದು, ಹೊಸ ಲೈನ್ ಅಳವಡಿಸುವ ಸಮಯದಲ್ಲಿ ಅರ್ಜಿದಾರರಿಗೆ ಭೂ ಪರಿಹಾರ ಕೋಟ್ಟಿಲ್ಲ. ನ್ಯಾಯಾಲಯದ ಆದೇಶ ಇದ್ದಲ್ಲಿ ಮಾತ್ರ ನ್ಯಾಯಾಲಯದಲ್ಲಿ ಭೂ ಪರಿಹಾರ ಹಣ ಕಟ್ಟುತ್ತೇವೆ. ಮಿನಿಸ್ಟ್ರಿ ಗೈಡ್ ಲೈನ್ಸ್ ಪ್ರಕಾರ ರೈತರಿಗೆ ಭೂ ಪರಿಹಾರ ಕೊಡಬೇಕು ಎಂದು ಗೈಡ ಲೈನ್ಸ ಇದೆ ಎಂದರೆ – ಈಗಿನ ಕಾಮಗಾರಿಗೆ ಸದರಿ ಗೈಡ್ ಲೈನ್ಸ ಅನ್ವಯವಾಗುತ್ತದೆ. 2015 ರಲ್ಲಿ ಸದರಿ ಗೈಡ್ ಲೈನ್ಸ ಜಾರಿಗೆ ಬಂದಿರುತ್ತದೆ ಎನ್ನುವುದು ಸುಳ್ಳು. ಸದರಿ ಗೈಡ್ಲೈನ್ಸ ಮುಚ್ಚಿಟ್ಟು ಅರ್ಜಿದಾರರಿಗೆ ಆ ಸಮಯದಲ್ಲಿ ಗೈಡ್ ಲೈನ್ಸ ಬಂದಿರಲಿಲ್ಲ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಬೆಳೆ ಪರಿಹಾರವನ್ನು ಅರ್ಜಿದಾರರಿಗೆ ಕೊಟ್ಟಿದ್ದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಿ.ಆರ್.2 ದಾಖಲೆಯನ್ನು ನಮ್ಮ ಇಲಾಖೆ ತಯಾರು ಮಾಡಿದ ದಾಖಲೆ ಇರುತ್ತದೆ. ನಿಆರ್.2 ನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ನಾವು ತಯಾರು ಮಾಡಿ ನ್ಯಾಯಾಲಯಕ್ಕೆ ಕೊಟ್ಟಿರುತ್ತೇವೆ ಎನ್ನುವುದು ಸುಳ್ಳು.

ಸದರಿ ದುರಸ್ತಿ ಕಾಮಗಾರಿ 2016 ರಲ್ಲಿ ಮುಕ್ತಾಯವಾಗಿರುತ್ತದೆ ಎನ್ನುವುದು ಸುಳ್ಳು. ಅರ್ಜಿದಾರರು ಕಾಲ ವಿಳಂಬ ಮಾಡಿ ಅರ್ಜಿ ಸಲ್ಲಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ಆ ಕಾರಣದಿಂದ ನಾವು ಅರ್ಜಿದಾರರಿಗೆ ಭೂ ಪರಿಹಾರ ಕೊಡಲು ಬಾಧ್ಯಸ್ಥರಿರುತ್ತೇವೆ ಎನ್ನುವುದು ಸುಳ್ಳು. ದುರಸ್ತಿ ಕಾಮಗಾರಿ ಮಾಡಿದ್ದು , ಆ ಸಮಯದಲ್ಲಿ ಯಾವ ಯಾವ ಸರ್ವೆ ನಂಬರ್ ನಲ್ಲಿ ಸದರಿ ಕೆಲಸ ಮಾಡಲಾಗಿದೆ ಎಂದು ಆ ದಾಖಲೆಗಳು ನಮ್ಮ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿದಾರರ ಜಮೀನಿನಲ್ಲಿ ಎಷ್ಟು ಉದ್ದ ಲೈನ್ ಎಳೆಯಲಾಗಿದೆ ಎಂದು ನಮ್ಮ ಕಛೇರಿಯಲ್ಲಿ ದಾಖಲೆ ಲಭ್ಯವಿದೆ ಎನ್ನುವುದು ಸುಳ್ಳು.

ಸದರಿ ಅರ್ಜಿದಾರರ ಜಮೀನಿನಲ್ಲಿ ಲೈನ್ ಎಷ್ಟು ಉದ್ದ ಹೋಗಿದೆ ಎಂದು ಅಳತೆ ಕೊಡಲು ನಾವು ಬಾಧ್ಯಸ್ಥರು ಎನ್ನುವುದು ಸರಿಯಲ್ಲ. ದುರಸ್ತಿ ಕಾಮಗಾರಿ ಮಾಡುವಾಗ ನಾವು ಅರ್ಜಿದಾರರಿಗೆ ನೋಟೀಸು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಸದರಿ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಅರ್ಜಿದಾರರ ಜಮೀನಿನಲ್ಲಿ ಸುಮಾರು 200 ಮೀಟರ್ ಉದ್ದ ಲೈನ್ ಎಳೆಯಲಾಗಿದೆ ಎನ್ನುವುದು ಗೊತ್ತಿಲ್ಲ.

ಅರ್ಜಿದಾರರ ಜಮೀನಿನಲ್ಲಿ ಲೈನ್ ಎಳೆಲಾಗಿದೆ ಎನ್ನುವುದು ನಿಜ. ಅರ್ಜಿದಾರರಿಗೆ ಖುದ್ದಾಗಿ ನೋಟೀಸು ಕೊಟ್ಟಿಲ್ಲ, ಆದರೆ ದಿನಪತ್ರಿಕೆಯಲ್ಲಿ ಸಾರ್ವಜನಿಕವಾಗಿ ನೋಟೀಸು ಕೊಟ್ಟಿರುತ್ತೇವೆ. ಎಲ್ಲಾ ಅರ್ಜಿದಾರರು ವಿದ್ಯಾವಂತರಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಅರ್ಜಿದಾರರು ಅವಿದ್ಯಾವಂತರಾಗಿರುವುದರಿಂದ ದಿನಪತ್ರಿಕೆಯಲ್ಲಿ ಜಾಹಿರಾತು ಪ್ರಕಟಣೆ ಮಾಡಿದ ವಿಚಾರ ಅರ್ಜಿದಾರರಿಗೆ ಗೊತ್ತಾಗಿರುವುದಿಲ್ಲ ಎನ್ನುವುದು ಸರಿಯಲ್ಲ. ಅರ್ಜಿದಾರರಿಗೆ ಪರಿಹಾರದ ಹಣ ಕೊಡಲು ನಾವೇ ಬದ್ಧರಿದ್ದರೂ ಸಹ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಮಾಹಿತಿಯನ್ನು ನೀಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅರ್ಜಿದಾರರು ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿರುವುದರಿಂದ ಅರ್ಜಿಯಲ್ಲಿ ಕೇಳಿರುವ ಪರಿಹಾರವನ್ನು ನಾವು ಅರ್ಜಿದಾರರಿಗೆ ಕೊಡಲು ಬಾಧ್ಯಸ್ಥರಿರುತ್ತೇವೆ ಎನ್ನುವುದು ಸುಳ್ಳು. ಲೈನ್ ಗೆ ಸಂಬಧಪಟ್ಟಂತೆ ನಾವು ಆಗಾಗ ಅದರ ನಿರ್ವಹಣೆ ಮಾಡುತ್ತೇವೆ. ಆ ಸಮಯದಲ್ಲಿ ಬೆಳೆ ನಷ್ಟ ಉಂಟಾಗುತ್ತದೆ ಎನ್ನುವುದು ಸುಳ್ಳು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.